# 21ನೇ ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆ ಆರ್.ಜಿ.ಎನ್.ಎಲ್.ಯು ತಂಡಕ್ಕೆ ಪ್ರಥಮ ಬಹುಮಾನ



ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಹಾಗೂ ಸೊಸೈಟಿ ಆಫ್ ಮೂಟರ್ಸ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 21ನೇ ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಪಂಜಾಬ್‌ನ ಪಾಟಿಯಾಲದ ರಾಜೀವ್‌ಗಾಂಧಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದರು.

ಗೌ,ನ್ಯಾ. ಎಸ್. ಬೋಪಣ್ಣರವರು ಮುಖ್ಯ ಅತಿಥಿಯಾಗಿ ಮಾತನಾಡಿ ಈ ಅಣಕು ನ್ಯಾಯಾಲಯದ ಸ್ಪರ್ಧೆ, ಕಾನೂನು ವಿದ್ಯಾರ್ಥಿಗಳಿಗೆ ಬಹಳ ಸಹಾಯಕಾರಿಯಾಗಿದ್ದು, ಇಲ್ಲಿ ಸೋಲು ಅಥವಾ ಗೆಲುವು ಎಂಬ ತಂಡಗಳಿರುವುದಿಲ್ಲ. ಎರಡು ತಂಡಗಳಲ್ಲಿ ಒಂದು ತಂಡ ಯಶಸ್ಸನ್ನು ಸಾಧಿಸಿದ್ದಾರೆ ಎನ್ನಬಹುದು ಎಂದು ತಿಳಿಸಿದರು. ಧನಾತ್ಮಕ ಚಿಂತನೆಯಲ್ಲಿ ನಾವು ಪ್ರಕರಣಗಳನ್ನು ನಡೆಸಬೇಕು. ಈ ಸ್ಪರ್ಧೆಗಳಲ್ಲಿ ಸೋಲು ಎನ್ನುವುದೇ ಇರುವುದಿಲ್ಲ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಒಂದು ದೊಡ್ಡ ಗೆಲುವು ಎಂದು ತಿಳಿಸಿದರು. ಈ ಅಣಕು ನಾಯ್ಯಾಲಾಯದ ಸ್ಪರ್ಧೆಗಳ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯದ ಜೊತೆಗೆ ಅದರ ವಾಕ್ ಚಾತುರ್ಯ ಬೆಳವಣಿಗೆಗೆ ಅನುಕೂಲ ಎಂದು ಅವರು ತಿಳಿಸಿದರು.

ನ್ಯಾಯಮೂರ್ತಿ ಎ.ಎನ್.ಜಿ. ವೇಣುಗೋಪಾಲಗೌಡರು ಮಾತನಾಡಿ ಎಲ್ಲಾ ವಿವಿಧ ರಾಜ್ಯಗಳಿಂದ ಬಂದಿರುವ 28 ತಂಡಗಳಿಗೆ ಅಭಿನಂದನೆ ತಿಳಿಸಿ, ಇಂತಹ ಕಾರ್ಯಕ್ರಮಗಳಲ್ಲಿ ಭಾವಹಿಸುವುದು ಒಂದು ದೊಡ್ಡ ಅವಕಾಶ ಮತ್ತು ಇಂತಹ ಕಾರ್ಯಕ್ರಮಗಳಿಂದ ನಿಮಗೆ ನಿರಂತರವಾದ ತರಬೇತಿಯಾಗುವುದರ ಜೊತೆಗೆ, ವಾದ ಮಾಡುವ ಕೌಶಲ್ಯತೆ ಬೆಳೆಯುತ್ತದೆ. ಸೋಲು ಗೆಲುವು ಸಾಮಾನ್ಯವಾಗಿರುತ್ತದೆ ಸೋತವರೇ ಒಳ್ಳೆಯ ವಕೀಲರಾಗಲು ಸಾಧ್ಯ ಮತ್ತು ಯಶಸ್ಸು ವೃತ್ತಿಯಲ್ಲಿ ಕಾಣುತ್ತಾರೆ. ಸೋಲಿನ ತಂಡ ನಿರಾಶೆಗೆ ಗು–ರಿಯಾಗದೆ ಇಲ್ಲಿನ ಅನುಭವವೇ ನಿಮಗೆ ನಿಜವಾದ ಗೆಲುವು ಎಂದು ತಿಳಿಸಿದರು.

ನ್ಯಾಯಮೂರ್ತಿ ಬಿ. ವೀರಪ್ಪನವರು ಮಾತನಾಡಿ ವಿದ್ಯಾರ್ಥಿಗಳು ಶ್ರಮ, ಶ್ರದ್ಧೆ, ಪ್ರಾಮಾಣಿಕತೆಯಿಂದ ಇರಬೇಕು. ಹಣ ಸಂಪಾದಿಸುವುದೊಂದೆ ಅಲ್ಲ ಎಲ್ಲರಿಗೂ ಸೇವಾ ಮನೋಭಾವ ಇರಬೇಕು ಎಂದು ತಿಳಿಸಿದರು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಂಶೋಧನೆ ಮತ್ತು ತರಬೇತಿ ವಿಭಾಗದ ಜಂಟಿ ಕಾರ್ಯದರ್ಶಿ ಜೆ.ಎಸ್. ಕೊಚ್ಚರ್ ಮಾತನಾಡಿ ಈ ಅಣಕು ನ್ಯಾಯಾಲಯದ ಸ್ಪರ್ಧೆ ಮಾನವ ಹಕ್ಕುಗಳ ಸಮಸ್ಯೆಯನ್ನು ಇಟ್ಟುಕೊಂಡು ಕಾರ್ಯಕ್ರಮದಲ್ಲಿ ಬಹಳ ಉತ್ತಮವಾಗಿ ನಡೆಸಿಕೊಟ್ಟಿರುವುದು ಅಭಿನಂದನಾರ್ಹ ಎಂದು ತಿಳಿಸಿದರು. ಇಂದಿನ ದಿನಗಳಲ್ಲಿ ಹಲವಾರು ಮಾನವ ಹಕ್ಕುಗಳ ವಿಚಾರಗಳ ಚರ್ಚೆ ಬಹಳ ಅತ್ಯಗತ್ಯ ಎಂದು ತಿಳಿಸಿದರು.

ಬೆಂ,ವಿ.ವಿ ಕುಲಸಚಿವ ಪ್ರೊ. ಕೆ.ಎನ್. ನಿಂಗೇಗೌಡ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಕಾನೂನು ಶಿಕ್ಷಣ ಗುಣಮಟ್ಟತೆಯನ್ನು ಹೆಚ್ಚಿಸಲು ಈ ರೀತಿಯ ಕಾರ್ಯಕ್ರಮಗಳ ಬಹಳ ಅನುಕೂಲಕಾರಿ ಮತ್ತು ಮುಂದಿನ ವೃತ್ತಿ ಜೀವನದ ಕೌಶಲ್ಯತೆ ಬೆಳೆಸಿಕೊಳ್ಳಲು ಈ ಅಣಕು ನ್ಯಾಯಾಲಯ ಸ್ಪರ್ಧೆಗಳು ತುಂಬಾ ಅರ್ಥಪೂರ್ಣವಾದದ್ದು. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲು ಕಾನೂನು ವಿದ್ಯಾರ್ಥಿಗಳ ಪಾತ್ರ ಅದ್ವಿತೀಯ ಎಂದು ತಿಳಿಸಿದರು. ಪಂಜಾಬ್‌ನ ಪಾಟಿಯಾಲದ ತಂಡದಲ್ಲಿ ಸಂಸ್ಕೃತಿ ಶರ್ಮ, ಸುವರ್ಣ ಜೈನ್, ಸಾಹಿಲ್ ಶರ್ಮ ಇದ್ದರು. ಮಹಾರಾಷ್ಟ್ರದ ಪುಣೆಯ ಐ.ಎಲ್.ಎಸ್. ಕನೂನು ಕಾಲೇಜಿನ ವಿದ್ಯಾರ್ಥಿಗಳಾದ ಕೆ. ಯಶ್, ಸುಗಾಂತಿ ರೂಪಿಯಾ, ಶ್ರೇಯಾ ಪ್ರಸಾದ ರನ್ನರ್ ಅಪ್ ಆದರು.

ಜಾರ್ಖಂಡನ ರಾಂಚಿಯ ಎನ್.ವಿ.ಎಸ್.ಆರ್.ಎಲ್. ಕಾಲೇಜಿನ ಅಮೋಘ್ ಶ್ರೀವಾಸ್ತವ, "ಉತ್ತಮ ವಿದ್ಯಾರ್ಥಿ ವಕೀಲ" ಪ್ರಶಸ್ತಿ ಪಡೆದರು. ಕೇರಳದ ತಿರುವನಂತಪುರದ ಕಾನೂನು ಅಕಾಡೆಮಿಯ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ಆರ್.ವಿ. ಅಭಿರಾಮ, ಐಶ್ವರ್ಯರಾಣಿ, ಜೆ.ಎಂ. ರಮ್ಯಾ, "ಉತ್ತಮ ಮೆಮೋರಂಡಮ್" ಪ್ರಶಸ್ತಿ ಪಡೆದರು. ಗುಜರಾತ್‌ನ ಗಾಂಧಿನಗರದ ಜಿ.ಎನ್.ಎಲ್.ಯು ವಿದ್ಯಾರ್ಥಿನಿ ವರ್ಣಿತಾ ಸಿಂಗ್ "ಉತ್ತಮ ಸಂಶೋಧಿಕಿ ಪ್ರಶಸ್ತಿ"ಗೆ ಭಾಜನಾರದರು.

# ಮನುಷ್ಯ ಮನುಷ್ಯರಲ್ಲಿ ಮನುಷ್ಯತ್ವ ಗುರುತಿಸುವುದು ಮುಖ್ಯವಾಗಬೇಕು: ಡಾ. ಕೆ ಕೃಷ್ಣಪ್ಪ



ಇಂದೂ ದಲಿತ ಜಾತಿ ಹಾಗೂ ಮಹಿಳೆ ಇಬ್ಬರೂ ಸಮಾಜದಲ್ಲಿ ಅಸ್ಪೃಶ್ಯತೆಯ ನೋವಿನಿಂದ ದೌರ್ಜನ್ಯಕ್ಕೆ ಒಳಗಾಗಿ ತಿರಸ್ಕರಿಸಲ್ಪಟ್ಟಿದ್ದು ಮೇಲುವರ್ಗ, ಹಾಗೂ ಪುರುಷ ಪ್ರಧಾನತೆ ಹಂತಹಂತವಾಗಿ ಅಧಿಕಾರದ ದಾಹಕ್ಕಾಗಿ ಈ ಇಬ್ಬರನ್ನು ತುಳಿಯುತ್ತಿರುವುದು ಅಮಾನವೀಯತೆಯಿಂದ ಕಾಣುತ್ತಿರುವುದು ದುಃಖಿದ ಸಂಗಾತಿ ಹಾಗಾಗಿ 'ಮಾನವಜಾತಿ ತಾನೊಂದೇ ವಲಂ' ಎನ್ನುವಂತೆ ಮನುಷ್ಯ ಮನುಷರಲ್ಲಿ ಮನುಷ್ಯಾತ್ವ ಗುರುತಿಸುವುದು ಮುಖ್ಯವಾಗಬೇಕು ಎಂದು ಕನ್ನಡ ಅಧ್ಯಯನ ಕೇಂದ್ರ ಸರ್ಕಾರಿ ಕಲಾಕಾಲೇಜು ಸಂಯೋಜಕ ಡಾ. ಕೆ ಕೃಷ್ಣಪ್ಪ ಹೇಳಿದರು,

ಅವರು ಜಾಲಹಳ್ಳಿಯ ಸೈಂಟ್ ಕ್ಲಾರೆಟ್ ಕಾಲೇಜಿನಲ್ಲಿ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಸೈಂಟ್ ಕ್ಲಾರೆಟ್ ಕಾಲೇಜಿನ ಭಾಷಾ ವಿಭಾಗವೂ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿದ್ದು ಕನ್ನಡದಲ್ಲಿ ದಲಿತ ಸಾಹಿತ್ಯದಲ್ಲಿ ಅಭಿವ್ಯಕ್ತಿಯ ಆಯಾಮಗಳ ಪ್ರಸ್ತುತತೆ ಹಾಗೂ ಹಿಂದಿ ಭಾಷೆಯಲ್ಲಿ ಹಿಂದಿ ಸಾಹಿತ್ಯಮೇ ಮಹಿಳಾ ಉಪನ್ಯಾಸಕಾರೋಕಾ ಯೋಗಧಾನ್ ಎನ್ನುವ ವಿಚಾರ ಸಂಕಿರಣದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ ಯೇಸು ಹೇಳುವಂತೆ ನಿನ್ನಂತೆಯೇ ನಿನ್ನ ನೆರೆಹೊರೆಯವರನ್ನು ಪ್ರೀತಿಸು, ಪ್ರೀತಿಯಿಂದ ಮಾತ್ರ ಮನುಷ್ಯತ್ವರೂಪಿಸಲು ಸಾಧ್ಯ ಆದರಿಂದ ಪ್ರೀತಿಸುವವರನ್ನು ಒಂದು ಗೂಡಿಸುವಂತೆ ಸಮಾಜ ಸುಧಾರಣೆಯಾಗಬೇಕು ಜಾತಿಯಲ್ಲಿನ ಮೇಲರಿಮೆ ಕೀಳರಿಮೆ, ಭೇದಭಾವ ದೂರವಾಗಿ ಸಮಾಜದಲ್ಲಿ ಪುರುಷ/ಮಹಿಳೆ ಎಂಬ ತಾರತಮ್ಯ ಹೋಗಲಾಡಿಸಬೇಕಾದರೆ ವಿಶಾಲವಾದ ಮನೋಸ್ಥಿತಿ ಬೆಳಸಿಕೊಳ್ಳಬೇಕು ಇಂತಹ ಅನಿಶ್ಚಿತೆಯ ಸ್ಥಿತಿಯಲ್ಲಿ ಇಂತಹ ವಿಚಾರ ಸಂಕಿರಣಗಳಲ್ಲಿ ಹೆಚ್ಚು ಚರ್ಚೆಗಳು ನೆಡೆದಾಗ ಮಾತ್ರ ವಿಶ್ವಮಾನವ ಪ್ರಜ್ಞೆ ಬೆಳಸಿಕೊಳ್ಳಲಿಕೆ ಸಾಧ್ಯವಾಗುತ್ತದೆ ಎಂದು ವಿಷಯದ ಮನವರಿಕೆ ಮಾಡಿಕೊಟ್ಟರು.

ಜ್ಞಾನ ಕಿರಣ ಶಿಕ್ಷಕಸಂಘದ ಕಾರ್ಯದರ್ಶಿ ಲತಾಜಾಹಣ್ ಹಿಂದಿ ಸಾಹಿತ್ಯದಲ್ಲಿ ಮಹಿಳೆಯರ ಯೋಗದಾನದ ಬಗ್ಗೆ ಅರಿವು ಮೂಡಿಸಬೇಕು ಹೆಣ್ಣು ಹೆಣ್ಣಿಗೆ ಸಹಕಾರ ನೀಡಬೇಕೆಂದು ತಿಳಿಸಿದರು

ಉಪ ಪ್ರಾಂಶುಪಾಲರಾದ ರೆ.ಫಾ.ವಿನೀತ್ ಜಾರ್ಜ್ ಅಧ್ಯಕ್ಷೀಯ ಭಾಷಣದಲ್ಲಿ ಹೆಣ್ಣಿನ ಪ್ರಧಾನ್ಯತೆ, ಹಾಗೂ ತಾಯಿಯೇ ಮೊದಲಗುರು, ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ ಎನ್ನುತ್ತಾ ತಾಯಿ ಸರ್ವಸ್ವವನ್ನು ಮಕ್ಕಳಿಗಾಗಿ ತ್ಯಾಗಮಾಡಿರುತ್ತಳೆ ನಾವು ಸದಾ ಅವಳನ್ನು ಸ್ಮರಿಸಬೇಕು ಇಂದೂ ಹೆಣ್ಣು ಎಂದರೆ ಕೀಳರಿಮೆಯಿಂದ ಕಾಣುವ ಸದಾ ದೌರ್ಜನ್ಯಕ್ಕೆ ನೋವಿಗೆಸಿಲುಕುವ ಅಪಮಾನಕೊಳಗಾಗುವ ಹೆಣ್ಣಿನ ಶೋಚನೀಯ ಸ್ಥಿತಿಯನ್ನು ಸುಧಾರಣೆಯಾಗಬೇಕಾದರೆ ನಾವೆಲ್ಲರು ಒಂದೇ ಎಂಬ ವಿಶಾಲ ಮನೋಭಾವ ಬೆಳಸಿಕೊಳಬೇಕೆಂಬ ವಿಚಾರಧಾರೆಯನ್ನು ಪ್ರಸ್ತಾಪಿಸಿದರು,

ಗೋಷ್ಠಿಯಲ್ಲಿ ಸಿದ್ಧಲಿಂಗಪ್ಪ ದೇಶ್‌ಮುಖ್ ನಿರೂಪಣೆ ಮಾಡಿದರು ಡಾ.ನಿತ್ಯಾನಂದ ಶೆಟ್ಟಿ ಪ್ರಾಧ್ಯಾಪಕರು ಡಾ.ಡಿವಿ ಗುಂಡಪ್ಪ ಅಧ್ಯಯನ ಕೇಂದ್ರ ತುಮಕೂರು ವಿಶ್ವವಿದ್ಯಾಲಯ ತುಮಕೂರು ಗೋಷ್ಠಿಯ ಅಧ್ಯಕ್ಷತೆ ವಹಿಸಿದರು ಸಂಪನ್ಮೂಲ ವ್ಯಕ್ತಿಗಳಾದ ಡಾ. ಸುಬ್ರಮಣ್ಯಸ್ವಾಮಿ ಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಅಮ್ಮಣಿ ಕಾಲೇಜು ಇವರು "ದಲಿತ ಆತ್ಮಕತೆಗಳು ಒಂದು ಸಾಂಸ್ಕೃತಿಕ ಒಳನೋಟ" ಎನ್ನುವ ವಿಷಯಕ್ಕೆ ಪ್ರಬಂಧ ಮಂಡಿಸಿದರು ನಂತರ ಡಾ. ಶೀಲಾದೇವಿಮಳಿಮಠ ಮುಖ್ಯಸ್ಥರು ಬಿ.ಎಂ.ಎಸ್ ಕಾಲೇಜು ಬಸವನಗುಡಿ ಬೆಂಗಳೂರು ಇವರು "ದಲಿತಸಾಹಿತ್ಯ ಸ್ತ್ರೀ ಸಂವೇದನೆ" ಎನ್ನುವ ವಿಷಯಕ್ಕೆ ಪ್ರಬಂಧ ಮಂಡಿಸಿದರು ನಂತರ ಪ್ರಶ್ನೋತ್ತರಗಳ ಸಂವಾದ ನೆಡದು ಗೋಷ್ಠಿ ಮುಕ್ತಾಯವಾಯಿತು.

60ಕ್ಕ ಹೆಚ್ಚು ವಿವಿಧ ಕಾಲೇಜುಗಳ ಕನ್ನಡ ಹಾಗೂ ಹಿಂದಿ ಪ್ರಾಧ್ಯಾಪಕರು, ಸಂಶೋದನಾರ್ಥಿಗಳು ಭಾಗವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡ ಪ್ರಾಧ್ಯಪಕರು ಬೆಂಗಳೂರು ವಿ.ವಿ. ಹಾಗೂ ನಿರ್ದೇಶಕರು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಜ್ಞಾನಭಾರತಿ ಬೆಂಗಳೂರು ಡಾ. ಸಿ.ಬಿ. ಹೊನ್ನುಸಿದ್ಧಾರ್ಥ ಮಾಡಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ರೆ.ಫಾ.ಡಾ. ಸಾಬುಜಾರ್ಜ್ ವಹಿಸಿದರು ಉಪಪ್ರಾಂಶುಪಾಲರಾದ ರೆ.ಫಾ. ವಿನೀತ್ ಜಾರ್ಜ್ ಭಾಷಾವಿಭಾಗದ ಮುಖ್ಯಸ್ಥರಾದ ಮಾದೇಶ್ ಎನ್ . ಶಶಿಕಲಾ. ಯು. ರಾಜೇಂದ್ರ ಶೇಖರ ವ್ಯಾಸ ಮತ್ತಿತರರು ಉಪಸ್ಥಿತರಿದ್ದರು.